ಕರ್ನಾಟಕ ವಿಧಾನ ಸಭೆ

ಬುಧವಾರ 29ನೇ ಜುಲೈ 2009ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 10 ಗಂಟೆ 55 ನಿಮಿಷಕ್ಕೆ ಸಮಾವೇಶಗೊಂಡಿತು. ಅಧ್ಯಕ್ಷರು ಶ್ರೀ ಜಗದೀಶ್ ಶೆಟ್ಟರ್‌ರವರು ಪೀಠವನ್ನು ಅಲಂಕರಿಸಿದ್ದರು.

(ಸದನವು 10–55 ಗಂಟೆಗೆ ಪ್ರಾರಂಭವಾಯಿತು ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

(11-00 AM)

1. ಚುನಾವಣಾ ಪ್ರಸ್ತಾಪ :

ವಿಷಯ : ವಿಧಾನ ಸಭೆಯ ವಿವಿಧ ಸಮಿತಿಗಳನ್ನು ರಚಿಸುವ ಬಗ್ಗೆ.

ಶ್ರೀ ಎಸ್. ಸುರೇಶ್‌ಕುಮಾರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 14–07–09 ರಂದು ವಿಧಾನಸಭೆಯ ಸಮಿತಿಗಳನ್ನು ರಚಿಸುವ ಪ್ರಸ್ತಾವನೆಯನ್ನು ಮಂಡಿಸಿದ್ದು, ಚುನಾವಣಾ ಕಾರ್ಯಕ್ರಮಗಳ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಅಲ್ಲದೆ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯಗಳ ಸೆನೆಟ್‌ಗೆ ಮೂರು ಜನ ಸದಸ್ಯರನ್ನು ಹಾಗೂ ಅನಾಥಾಲಯ ಮತ್ತು ಧಾರ್ಮಿಕ ಸ್ಥಳಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಂಡಳಿಗೆ ಇಬ್ಬರು ಸದಸ್ಯರನ್ನು ಚುನಾಯಿಸಲು ಸಹ ಪ್ರಸ್ತಾಪವನ್ನು ಮಂಡಿಸಲಾಗಿರುತ್ತದೆ. ಆದುದರಿಂದ ಸದಸ್ಯರನ್ನು ನಾಮನಿರ್ದೇಶನ ಮಾಡಲು ಈ ಸದನವು ಮಾನ್ಯ ಸಭಾಧ್ಯಕ್ಷರಿಗೆ ಅಧಿಕಾರ ನೀಡಬೇ ಕೆಂದು ಕೋರುತ್ತದೆ.

ಅಧ್ಯಕ್ಷರು : ಪ್ರಸ್ತಾವ ಮಂಡಿಸಲಾಗಿದೆ. ಮಾನ್ಯ ಸಚಿವರು ಮಂಡಿಸಿದ ಪ್ರಸ್ತಾವಕ್ಕೆ ಸದನದ ಸಹಮತಿ ಇದೆ ಎಂದು ನಾನು ಭಾವಿಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು : ಮಾನ್ಯ ರೇವಣ್ಣನವರೇ ನೀವೇನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರಿ ಅದು ಬೇಡ, ಡಿಮಾಂಡ್ ಮೇಲೆ ಚರ್ಚೆ

ಮಾಡೋಣ. ಪ್ರತಿ ದಿನಾ ಒಂದೊಂದು ವಿಷಯ ಚರ್ಚೆ ಮಾಡಿದ್ದೀರಿ. ಇವತ್ತು ಕೊನೇ ದಿವಸ. ಇಲ್ಲಿಯವರೆಗೂ ತಾವು ಎಷ್ಟು ನಿಲುವಳಿ ಸೂಚನೆ ಗಳನ್ನು ಕೊಟ್ಟಿದ್ದೀರಿ ಅದೆಲ್ಲವಕ್ಕೂ ನಾನು ಅವಕಾಶ ಮಾಡಿ ಕೊಟ್ಟಿದ್ದೇನೆ. ಸರ್ಕಾರದವರೂ ಸಾಕಷ್ಟು ಉತ್ತರಗಳನ್ನು ಕೊಟ್ಟಿದ್ದಾರೆ. ಮಾನ್ಯ ರೇವಣ್ಣನವರೆ ನನ್ನದೊಂದು ಮನವಿ ಇದೆ. ಈ ವಿಷಯವನ್ನು ಬಿಟ್ಟು ತಾವು ಡಿಮಾಂಡ್ಸ್ ಮೇಲೆ ಚರ್ಚೆ ಮಾಡಿದರೆ ಇನ್ನಷ್ಟು ಅವಕಾಶ ಕೊಡುತ್ತೇನೆ. ನಿಮಗೆ ಮೊದಲು ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಯಾವ್ಯಾವುದೋ ವಿಷಯವನ್ನು ನಿಲುವಳಿ ಸೂಚನೆ ಮೂಲಕ ತರುವುದಕ್ಕಾಗುವುದಿಲ್ಲ. ಇದು ಒಂದು ವರ್ಷದ ಹಿಂದೆ ಆಗಿರುವುದು. ಇತ್ತೀಚೆಗೆ ಆಗಿರುವುದು ಅಲ್ಲ, ಜರೂರು ವಿಷಯವೂ ಅಲ್ಲ, ನಿರ್ದಿಷ್ಟ ವಿಷಯವೂ ಅಲ್ಲ. ಅದಕ್ಕಾಗಿ ದಯವಿಟ್ಟು ಈ ವಿಧೇಯಕ ಆದ ಮೇಲೆ ಮೊದಲನೆ ಭಾಷಣವೇ ಬೇಡಿಕೆಗಳ ಮೇಲೆ ಅವರೇ ಚರ್ಚೆ ಮಾಡಲಿ.

ಅಧ್ಯಕ್ಷರು : ಮಾನ್ಯ ರೇವಣ್ಣನವರೆ, ನಾನು ನಿಮಗೆ ಹೇಳಿದ್ದೇನೆ. ನೀವು ಡಿಮ್ಯಾಂಡ್ಸ್ ಮೇಲೆ ಮಾತನಾಡುವಾಗ ಮೊದಲು ಅದನ್ನೇ ಮಾತನಾಡಿ. ಮಾನ್ಯ ಸುರೇಶ್‌ಕುಮಾರ್‌ರವರು ಏನು ಹೇಳಿದರು, ಒಂದು ವರ್ಷದ ಹಿಂದೆ ನಡೆದಂತಹ ಘಟನೆ ಆಗಿರುವುದರಿಂದ ಅದು prima facie ಆಗಿ ಬರುವುದಿಲ್ಲವೆಂದು ನಾನು ಹೇಳಿದ್ದೇನೆ. ನಾನು ಈಗಾಗಲೇ ಡಿಸಿಷನ್ ಕೊಟ್ಟಿದ್ದೇನೆ. ಡಿಮಾಂಡ್ಸ್ ಮೇಲೆ ಮಾತನಾಡುವಾಗ ಅದರ ಬಗ್ಗೆ ಮಾತನಾಡಿ ನಿಮಗೆ ಯಾರೂ ಬೇಡವೆಂದು ಹೇಳುವುದಿಲ್ಲ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, Preliminary Submission ಮಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು : Preliminary Submission ಮಾಡುವುದಕ್ಕೆ ಬರುವುದಿಲ್ಲ. ನಾನು ಈಗಾಗಲೇ ಅದರ ಬಗ್ಗೆ communicate ಮಾಡಿದ್ದೇನೆ. ಡಿಮಾಂಡ್ಸ್ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆಂದು ನಿಮಗೆ ಈಗಾಗಲೇ communicate ಕೂಡ ಮಾಡಿದ್ದೇನೆ. ದಯವಿಟ್ಟು ಬೇಡ. ನಿಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ. ಬಿಲ್‌ಗಳು ಪಾಸ್ ಆಗಲಿ, ಅದಾದ ಮೇಲೆ ಡಿಮಾಂಡ್ಸ್ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, Chief Secretary ಕೈಯಲ್ಲಿ Affidavit ಕೊಡಿಸಿ ನಂತರ ನೀವು ಆದೇಶ ಹೊರಡಿಸಿದ್ದೀರಿ. 1400 ಕೋಟಿ ರೂಪಾಯಿಗಳ ಹಗರಣ ಇದು.

ಅಧ್ಯಕ್ಷರು : I have already rejected your Adjournment Motion, please discuss it on demands.

ಶ್ರೀ ಹೆಚ್.ಸಿ.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡಿದಾಗ ತಾವು ಅದಕ್ಕೆ ಅವಕಾಶ ಕೊಟ್ಟಿದ್ದೀರಿ. ಈ ದಿನ ಕಡೆ ದಿವಸ ಇದೊಂದು ಸಾರಿ ಅವಕಾಶ ಕೊಟ್ಟು ಬಿಡಿ.

ಅಧ್ಯಕ್ಷರು : ಇಲ್ಲಿ important Bills ಇವೆ. Ordinance replace ಮಾಡುವಂಥದ್ದು ಇವೆ. ಇಲ್ಲಿ ಪಾಸಾಗಿ ನಂತರ ಕೌನ್ಸಿಲ್‌ಗೆ ಹೋಗಬೇಕು, ಇಲ್ಲಿಯವರೆಗೆ ಸಹಕಾರ ಕೊಟ್ಟಿದ್ದೀರಿ ಇವತ್ತು ಕೊನೆ ದಿವಸ ಇವತ್ತೂ ಸಹಕಾರ ಕೊಡಿ.

ಮಧ್ಯಾಹ್ನ ಮೂರು ಗಂಟೆಗೆ ಬಜೆಟ್ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕು. ನಾನು ಮೂರು ಗಂಟೆಗೆ ಮುಖ್ಯಮಂತ್ರಿಗಳ ಉತ್ತರ ಎಂದು ನಿಗದಿ ಮಾಡಿದ್ದೇನೆ. ಇಂದು ಮಧ್ಯಾಹ್ನ ಮೂರು ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು Demands ಮೇಲಿನ ಚರ್ಚೆಗೆ ಉತ್ತರವನ್ನು ಕೊಡಬೇಕೆಂದು ನಿಗದಿ ಮಾಡಿದ್ದೇನೆ. ಅಷ್ಟರೊಳಗಾಗಿ ವಿಧೇಯಕಗಳು ಮತ್ತು ಬೇಡಿಕೆಗಳ ಮೇಲಿನ ಚರ್ಚೆ ಮುಗಿಯಬೇಕು.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ನನಗೆ ಐದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ಈಗ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಪರ್ಯಾಲೋಚನಾ ಪ್ರಸ್ತಾವ ಮಂಡಿಸಿ.